ದಿನಾಂಕ: 24–01–2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀಸವಾಲು: ಶ್ರೀ ಮಾಣಿಕ್ ಕುಪ್ಪಣ್ಣ ವಕೀಲರಿಂದ :–**

1. ನಾನು ವಿದ್ಯಾಬ್ಯಾಸ ಮಾಡಿಲ್ಲ. ನಾನು ಚಿಕ್ಕವನಿಂದ ಒಕ್ಕಲುತನ ಮಾಡುತ್ತೇನೆ ಮತ್ತು ಜೂಲಗುಡ್ಡದಲ್ಲಿ ವಾಸವಿದ್ದೇನೆ. ಜೂಲಗುಡ್ಡದಿಂದ ಮಿಂಚೇರಿ 40 ಕಿ ಮಿ ಆಗುತ್ತದೆ. ಮಿಂಚೇರಿಗೆ ನಾನು ಆಗಾಗ ಬಂದು ಹೋಗುತ್ತೇನೆ ಬೀಗರು ಇದ್ದಾರೆ. ಈ ಕೇಸ್ ನ್ನು ವಾದಿ ನಮ್ಮ ಮೇಲೆ ಹಾಕಿದ್ದಾರೆ. ವಾದಿ ಹೊಲ ನಮ್ಮದು ಎಂದು ಕೇಸ್ ಹಾಕಿದ್ದಾರೆ. ನಾನು 28 ವರ್ಷದಿಂದೆ ಹೊಲ ಖರೀದಿಗೆ ಕೊಟ್ಟಿದ್ದೇವೆಂದು ಬಸಲಿಂಗಪ್ಪನ ಕಡೆಯಿಂದ ಸ್ಟಾಂಪ್ ಬರೆಸಿಕೊಂಡಿದ್ದೇವೆ. ಲಿಂಗಸೂಗೂರಿನಲ್ಲಿ ಬರೆಸಿದ್ದೇನೆ ಎಲ್ಲಿ ಬರೆಸಿದ್ದೇನೆ ಅಂತಾ ಗೊತ್ತಿಲ್ಲ. ದಾಖಲಾತಿ ಬರೆಯುವಾಗ, ಬಸಲಿಂಗಪ್ಪ, ಅಯ್ಯಪ್ಪ, ಬಸ್ಸಪ್ಪ ಇದ್ದನು. ಬಸಲಿಂಗಪ್ಪ ಸ್ಟಾಂಪ್ ತಂದಿದ್ದಾನೆ, ಯಾರು ಬರೆದಿದ್ದಾರೆ ಗೊತ್ತಿಲ್ಲ. ಕಾಗದ ಬರೆಯುವ ದಿನ ಮಾತುಕತೆಯಾಡಿದ ಬಗ್ಗೆ ನೆನಪಿಲ್ಲ. ನಾವು ಖರೀದಗೆ ಕೊಟ್ಟಿದ್ದೇವೆ ದುಡ್ಡು ಕೊಟ್ಟ ಮೆಲೆ ಖರೀದಿ ಮಾಡಿಕೊಡುತ್ತೇವೆಂದು ದಾಖಲಾತಿ ಬರೆದುಕೊಟ್ಟಿರುತ್ತಾರೆ. ಆ ದಿನ 20 ಸಾವಿರ ರೂಪಾಯಿ ಕೊಟ್ಟಿರುತ್ತೇವೆ. ಸ್ಟಾಂಪ್ ಬರೆದ ದಿನ ನಾವು 20 ಸಾವಿರ ಕೊಟ್ಟಿರುತ್ತೇವೆ. ಆದಾದ ನಂತರ 40 ಸಾವಿರ ರೂಪಾಯಿ ಕೊಟ್ಟಿರುತ್ತೇವೆ. ಮತ್ತೇ ದವಖಾನೆಯಲ್ಲಿದ್ದಾಗ 15 ಸಾವಿರ ರೂಪಾಯಿ ಕೊಟ್ಟಿರುತ್ತೇನೆ. ಮಾತುಕತೆ ಪ್ರಕಾರ ಸಂಪೂರ್ಣ ಹಣ ಕೊಟ್ಟಿರುತ್ತೇನೆ. ನಾನು ಮೇಲೆ ಹೇಳಿದ ಹಣ ಕೊಟ್ಟ ಬಗ್ಗೆ ದಾಖಲಾತಿಯಲ್ಲಿ ಬರೆದಿಲ್ಲ.

2. ನಾನು ಖರೀದಿಸಿದ ಆಸ್ತಿಯ ಸರ್ವೆನಂಬರ್ 24 ಅಥವಾ 25 ಇರಬಹುದು. ಸದರಿ ಆಸ್ತಿ ಮಿಂಚೇರಿಯಲ್ಲಿ ಬರುತ್ತದೆ. ನಾನು ಆಸ್ತಿ ಖರೀದಿಸಿದಾಗ ದಾವಾದ ಆಸ್ತಿಯ ಪೂರ್ವಕ್ಕೆ ಮರಿಯಪ್ಪ, ಪಶ್ಚಿಕ್ಕೆ ದುರಗಪ್ಪ, ಉತ್ತರಕ್ಕೆ ಕರಡಿಯವರು, ದಕ್ಷಿಣಕ್ಕೆ ದೇವಲಪ್ಪ ಇವರ ಜಮೀನು ಇವೆ. ಆ ದಿನ ಕಾಗದವನ್ನು ಯಾರು ಬರೆದರು ಅಂತಾ ನೆನಪಿಲ್ಲ. ಆ ಕಾಗದಕ್ಕೆ

ನಾನು ಸಹಿ ಮಾಡಿದ್ದೇನೆ. ನಿ ಡಿ 10 ನ್ನು ಸಾಕ್ಷಿಗೆ ತೋರಿಸಲಾಗಿ ಯಾವುದೇ ರೀತಿ ಹೆಬ್ಬೆಟ್ಟು ಗುರುತು ಕಾಣುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ನಿ ಡಿ 10 ರಲ್ಲಿ ಬರೆದ ವಿಷಯ ಗೊತ್ತಿಲ್ಲ. ಖರೀದಿ ಪತ್ರ ಮಾಡಿಸಿಕೊಡಲು ನಾನು ಬಸಲಿಂಗಪ್ಪನಿಗೆ ನೋಟಿಸ್ ಕೊಟ್ಟಿಲ್ಲ. ನನಗೆ ದಾಖಾಲತಿ ಬರೆದುಕೊಟ್ಟ ಮೇಲೆ 10–15 ವರ್ಷ ಬಿಟ್ಟು ಸತ್ತಿರುತ್ತಾನೆ. ಬಸಲಿಂಗಪ್ಪ ಜೀವ ಇದ್ದಾಗ ನಾನು ನಿ ಡಿ 10 ರ ಪ್ರಕಾರ ಯಾವುದೇ ದಾವೆ ಹೂಡಿಲ್ಲ.

3. ಬಸಲಿಂಗಪ್ಪ ಸತ್ತ ಮೇಲೆ ಅವರ ವಾರಸುದಾರರು ಆಸ್ತಿಯನ್ನು ಮಾಡಿಕೊಂಡಿದ್ದಾರೆ. ವಾದಿ ಆಸ್ತಿ ಖರೀದಿಸುವ ಪುರ್ವದಲ್ಲಿ ಹೊಲಕ್ಕೆ ಬಂದು ಆಸ್ತಿ ಖರಿದಿಸುತ್ತೇವೆಂದು ಹೇಳಿಲ್ಲ. ವಾದಿ ಆಸ್ತಿ ಖರೀದಿಸುವ ಬಗ್ಗೆ ಹೇಳಿದ್ದರೂ ಕೂಡಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸರ್ವೆ ಮಾಡಲು ಬಂದಾಗ ನನ್ನ ಮಕ್ಕಳು ತಕರಾರು ಮಾಡಿಲ್ಲ. ಅಳತೆ ಮಾಡಿದ ಮೇಲೂ ನಾನು ತಕರಾರು ಮಾಡಿಲ್ಲ. ನಾನು ಸರಸ್ವತೆಮ್ಮ ಅವರ ಮಕ್ಕಳಿಗೆ ನೋಟಿಸ್ ಕಳುಹಿಸಿರುತ್ತೇನೆ. ನಾನು ಸದರಿ ನೋಟಿಸ್ ನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ದಾವಾ ಆಸ್ತಿಯ ಚಕ್ ಬಂದಿ ಪೂರ್ವದಿಕ್ಕಿಗೆ ಮರಿಯಪ್ಪ ತಂದೆ ಹನುಮಪ್ಪ ಜಮೀನು, ಪಶ್ಚಿಮಕ್ಕೆ ದುರಗಪ್ಪನ ಜಮೀನು, ಉತ್ತರಕ್ಕೆ ಇಮಾಮಬಿ ಗಂಡ ಅಕಬರಸಾಬ ಜಮೀನು, ದಕ್ಷಿಣಕ್ಕೆ ಸರಕಾರಿ ಹಳ್ಳ ಎಂದರೆ ಸರಿ. ಬಸಲಿಂಗಪ್ಪ ಬರೆದುಕೊಟ್ಟ ಕಾಗದವನ್ನು ಸೃಷ್ಟಿಸಿದ್ದೇವೆಂದರೆ ಸರಿಯಲ್ಲ. ನಾವು 38 ವರ್ಷದಿಂದ ಸಾಗುವಳಿಯಲ್ಲಿದ್ದೇವೆಂದು ನುಡಿಯುತ್ತಾರೆ. 38 ವರ್ಷದಿಂದ ಸಾಗುವಳಿ ಮಾಡುತ್ತಿದ್ದೇವೆಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿ ಕೊಟ್ಟಿಲ್ಲ ಎಂದರೆ ಸರಿ. ವಾದಿಯ ಹೆಸರಿಗೆ ಆಸ್ತಿಯಾಗುವಾಗ ನನಗೆ ಗೊತ್ತಿರಲಿಲ್ಲ ಆಗಾಗ ತಕರಾರು ಮಾಡಿಲ್ಲ. ನಾನು ಎ ಸಿ ನ್ಯಾಯಾಲಯಕ್ಕೆ ಯಾವುದೇ ಕೇಸ್ ಹಾಕಿಲ್ಲ. ಎ ಸಿ ಕೋರ್ಟ್ ಗೆ ಅಪೀಲು ಮಾಡಿದ್ದೇನೆ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಎ ಸಿ ನ್ಯಾಯಾಲಯದಲ್ಲಿ ಆದೇಶ ನನ್ನ ವಿರುದ್ಧವಾಗಿದೆ ಎಂದರೆ ಸರಿಯಲ್ಲ.

4. ನಾನು ಸರಸ್ವತಮ್ಮ ಮತ್ತು ಖಾಜಾಹುಸೇನಿ ಮೇಲೆ ಕೇಸ್ ಹಾಕಿಲ್ಲ ಆದರೆ ಈಗ ಅದೇ ಕೇಸ್ ನಡೆಯುತ್ತಿದೆ ಎಂದು ನುಡಿಯುತ್ತಾರೆ. ವಾದಿ ಖರಿದಿಸುವ ಪೂರ್ವದಲ್ಲಿ ಬಸಲಿಂಗಪ್ಪನ ಹೆಂಡತಿ ಸ್ವಾಧೀನದಲ್ಲಿದ್ದಳು ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಯೇ ಆಸ್ತಿಯಲ್ಲಿ ಕಬ್ಜಾದಲ್ಲಿದ್ದಾನೆಂದರೆ 1 ವರ್ಷದಿಂದ ಕಬ್ಜಾದಲ್ಲಿದ್ದಾನೆ ಎಂದು ನುಡಿಯುತ್ತಾರೆ. ಈಗಲೂ ಕೂಡಾ ಆತನೇ ಸಾಗುವಳಿ ಹೊಂದಿದ್ದಾನೆಂದರೆ ಸರಿ. ಕೋರ್ಟ್ ನಿಂದ ಆದೇಶ ಇದ್ದಿದ್ದಕ್ಕಾಗಿ ಆತನಿಗೆ ಸ್ವಾಧೀನಕೊಟ್ಟಿದ್ದೇನೆಂದು ನುಡಿಯುತ್ತಾರೆ. ಬಸಲಿಂಗಪ್ಪನ 06-00 ಎಕರೆ ಹೊಲವನ್ನು ನನ್ನ ಸಹೋದರನಾದ ಮರಿಯಪ್ಪನ ಹೆಸರಿಗೆ ನಾವು ಖರೀದಿಸಿದ್ದೇವೆಂದರೆ ಸರಿ. ಖರೀದಿ ಪತ್ರದ ಪ್ರಕಾರ ಎಲ್ಲಾ ಹಣವನ್ನು ಕೊಟ್ಟಿದ್ದೇವೆಂದು ವಕೀಲರಿಗೆ ಹೇಳಿದ್ದೆವೆ ಮತ್ತು ಯಾವುದೇ ಬಾಕಿ ಹಣ ಉಳಿದಿರುವುದಿಲ್ಲ ಎಂದು ಹೇಳಿದ್ದೇವೆ. ನಮ್ಮ ಸಹೋದರರು ಖಾಸಗಿ ಖರೀದಿ ಪತ್ರದ ಪ್ರಕಾರ ಪಟ್ಟಿ ಮಾಡಿಕೊಂಡು ಉಳುಮೆ ಮಾಡುತ್ತಿದ್ದೇವೆಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿ ಕೊಟ್ಟಿಲ್ಲ.

5. ಬಸಲಿಂಗಪ್ಪ ಅರಾಮ ತಪ್ಪಿ ಎಷ್ಟು ದಿನಕ್ಕೆ ತೀರಿಕೊಂಡ ಅಂತಾ ಗೊತ್ತಿಲ್ಲ. ವಾದಿ ನಮಗೆ ಹೇಳಲಾರದೆ ಆಸ್ತಿ ಖರೀದಿಸಿದ್ದಾನೆಂದು ತಕರಾರು ಮಾಡಿದ್ದೇವೆಂದರೆ ಸರಿ. ಮಗ್ಗಲು ಹೊಲದವರು ನಾವು ಇದ್ದೇವೆ ನಾವು ಖರೀದಿಸುತ್ತಿದ್ದೇವೆಂದು ಖಾಜಾಹುಸೇನಿಗೆ ತಕರಾರು ಮಾಡಿದ್ದೇವೆಂದರೆ ಸರಿ. ತಕರಾರು ಮಾಡುವ ಹಕ್ಕು ಅಧಿಕಾರ ನನಗೆ ಇಲ್ಲ ಎಂದರೆ ಸರಿಯಲ್ಲ. ವಾದಿ ಖರೀದಿಸಿದಾಗಿನಿಂದ ಜಮೀನಿನ ಸ್ವಾಧಿನದಲ್ಲಿದ್ದಾನೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ.**
**ಸಹಿ/-**
**( ಚಂದ್ರಶೇಖರ ಪಿ. ದಿಡ್ಡಿ )**
ಹಿರಿಯ ಸಿವಿಲ್ ನ್ಯಾಯಾಧೀಶರು,
**ಲಿಂಗಸೂಗುರು.**